(ದಿನಾಂಕಃ 27.06.2016 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

*ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಇಎ. ವಕೀಲರಿಂದಃ*

3ನೇ ಪ್ರತಿವಾದಿ ನನ್ನ ಪ್ರಮಾಣ ಪತ್ರದಲ್ಲಿನ 5ನೇ ಪ್ಯಾರಾದಲ್ಲಿ ತಿಳಿಸಿರುವಂತೆ ಅವರು ಮಾಡಿದ ಬೇರೇ ವ್ಯವಹಾರಗಳನ್ನು ನನಗೆ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಬಗ್ಗೆ 3ನೇ ಪ್ರತಿವಾದಿ ಮಾಡಿದ ಎಲ್ಲಾ ವ್ಯವಹಾರಗಳು ನನಗೆ ತಿಳಿಸದೇ ಮಾಡಿರುತ್ತಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು 3ನೇ ಪ್ರತಿವಾದಿ ಸೇರಿ ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ತೆಗೆದುಕೊಂಡಿರುವುದಿಲ್ಲ. ನೋಟೀಸನ್ನು ನೀಡುವಾಗ 2ನೇ ಪ್ರತಿವಾದಿಯ ವಿಳಾಸ ಜಿಪಿಎನಲ್ಲಿ ಯಾವ ವಿಳಾಸ ಇತ್ತೋ ಅ ವಿಳಾಸವನ್ನು ನೋಟೀಸ್‌ನಲ್ಲಿ ತೋರಿಸಿರುತ್ತೇನೆ. ನಾನು ಹಾಜರುಮಾಡಿದ್ದ ನಿಶಾನೆ.ಪಿ.58 ಮತ್ತು ನಿಶಾನೆ.ಪಿ.61ರಲ್ಲಿ ಕಾಣಿಸುವ ದಾವೆಗಳು ಮತ್ತು ಈ ದಾವೆಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಇತರೇ ವಾದಿಗಳು 2ನೇ ಪ್ರತಿವಾದಿಗೆ ಒಟ್ಟು 3 ನೋಟೀಸ್‌ಗಳನ್ನು ಕೊಟ್ಟಿರುತ್ತೇವೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುತ್ತೇನೆ. ಹಾಜರುಮಾಡಿದ ಎಲ್ಲಾ ದಾಖಲಾತಿಯನ್ನು ನಾನೇ ಪಡೆದುಕೊಂಡು ಹಾಜರುಮಾಡಿರುತ್ತೇನೆ. ನಿಶಾನೆ.ಪಿ.7ದಾಖಲೆಯನ್ನು ತಾಲ್ಲೂಕು ಕಚೇರಿಯಿಂದ ನಾನೇ ಪಡೆದುಕೊಂಡಿರುತ್ತೇನೆ. ನಿಶಾನೆ.ಪಿ.7ನ್ನು 3ನೇ ಪ್ರತಿವಾದಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೆಯೇ ನಾನು ಹಾಜರುಮಾಡಿದ ಎಲ್ಲಾ

ದೃಢೀಕೃತ ನಕಲು ದಾಖಲೆಗಳು 3ನೇ ಪ್ರತಿವಾದಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಿವೇಶನಗಳಾಗಿದ್ದು ಅವುಗಳೆಲ್ಲಾ 1ನೇ ಪ್ರತಿವಾದಿ ಕಂಪನಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಕಚೇರಿಯಲ್ಲಿ ನನ್ನ ಹೆಸರಿನಲ್ಲಿ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ತೆರಿಗೆ ಕಟ್ಟುತ್ತಿಲ್ಲ ಎಂದರೆ ಸರಿಯಲ್ಲ. 19 ವರ್ಷದ ಹಿಂದೆ ಪಂಚಾಯಿತ್ತಿಗೆ ಕಟ್ಟಬೇಕಾದ ತೆರಿಗೆಯನ್ನು ನಾನು ಕಟ್ಟಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. 3ನೇ ಪ್ರತಿವಾದಿಯ ವಿರುದ್ಧ ನಾನು ಯಾವುದೇ ಪರಿಹಾರ ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ಅದು ನ್ಯಾಯಾಲಯಕ್ಕೆ ಬಿಟಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯವನ್ನು ಕೋರಿದ್ದು, ಸಮಯವನ್ನು ನೀಡಲಾಯಿತು

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎಂ ಒ

ಕೆ. ಶ್ರೀವಿದ್ಯಾ
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ರಾಮನಗರ.